**Office of the Director General of Police**
Commandant General, Home Guards & Director of Civil Defence and Director General Karnataka State Fire & Emergency Services
No. 1, Annaswamy Mudaliar Road
Banglore - 560 042

Phone : 25570733
: 22971501
Fax : 22971512

# KARNATAKA STATE FIRE & EMERGENCY SERVICES

## PARTIAL CLEARANCE CERTIFICATE

ಹಸ್ತಚಾಲಿತ ಫೈಲ್ ಸಂಖ್ಯೆ: GBC(1)598/2013 10/07/2019

ಡಾಕೆಟ್ ಸಂಖ್ಯೆ: KSFES/CC/141/2019

ಗೆ,

The Commissioner,
BBMP,
Corporation circle,
Hudson Circle,
Bangalore - 560 002.

ಮಾನ್ಯರೆ,

ವಿಷಯ: Khatha No.52/1, Bull Temple Road, Ward No. 49, K.G Nagar, Bangalore 560019., Bangalore South, BANGALORE - 560019 ರಲ್ಲಿ ನಿರ್ಮಿಸಿರುವ ಬಹುಮಹಡಿ Group B Educational Building ಕಟ್ಟಡ ಸ್ವಾಧೀನತೆ ಪಡೆಯಲು ಕ್ಲಿಯರೆನ್ಸ್ ಪತ್ರ ನೀಡುವ ಬಗ್ಗೆ.

ಉಲ್ಲೇಖ : 1) ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ನಿರಾಕ್ಷೇಪಣಾ ಪತ್ರ ಸಂ. ಡಾಕೆಟ್ ಸಂಖ್ಯೆ GBC(1)598/2013 ದಿನಾಂಕ 07/05/2016.
2) B.M. Sreenivasaiah Educational Trust and Khatha No.52/1, Bull Temple Road, Ward No. 49, K.G Nagar, Bangalore 560019., Bangalore South, BANGALORE - 560019 ರವರ ಪತ್ರ ದಿನಾಂಕ 13/05/2019

.........................................................................................................................................

ಬೆಂಗಳೂರು, ಕೆಂಪೇಗೌಡ ನಗರ ವಾರ್ಡ್ ಸಂಖ್ಯೆ.49, ಬಸವನಗುಡಿ ರಸ್ತೆ, ಖಾತೆ ಸಂ.52/1 ರಲ್ಲಿ 29.95 ಮೀಟರ್ ಎತ್ತರದ 2 ತಳಹಂತ, ನೆಲಹಂತ ಮತ್ತು 7 ಮೇಲಂತಸ್ತುಗಳನ್ನು ಹೊಂದಿರುವ ಅಕಾಡೆಮಿಕ್ ಬ್ಲಾಕ್, 29.50 ಮೀಟರ್ ಎತ್ತರದ 2 ನೆಲಹಂತ ಮತ್ತು 4 ಮೇಲಂತಸ್ತುಗಳನ್ನು ಹೊಂದಿರುವ ಫುಡ್ ಕೋರ್ಟ್ & ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಮತ್ತು 29.95 ಮೀಟರ್ ಎತ್ತರದ 2 ತಳಹಂತ, ನೆಲಹಂತ ಮತ್ತು 9 ಮೇಲಂತಸ್ತುಗಳನ್ನು ಹೊಂದಿರುವ ಎಂಎಲ್‌ಸಿಪಿ ಬ್ಲಾಕ್ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸಲು ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ದಿನಾಂಕ 02-04-2014 ರಂದು ನಿರಾಕ್ಷೇಪಣಾ ಪತ್ರ ನೀಡಲಾಗಿದೆ.

ಪ್ರಸ್ತುತ ಕಟ್ಟಡದ ನಿರ್ಮಾಪಕರಾದ B.M. Sreenivasaiah Educational Trust ರವರು ತಮ್ಮ ಉಲ್ಲೇಖಿತ ಪತ್ರದಲ್ಲಿ ಸದರಿ ಕಟ್ಟಡಗಳ ಪೈಕಿ -3 Academic Block,B.M. Sreenivasaiah Educational Trust ಬಹುಮಹಡಿ ನಿರ್ಮಾಣ ಹಾಗೂ ಅಗ್ನಿಶಮನ ಉಪಕರಣಗಳ ಅಳವಡಿಕೆ ಕಾರ್ಯ ಮುಗಿದಿದ್ದು, ಅದರ ಸ್ವಾಧೀನತೆಯನ್ನು ಪಡೆಯಲು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಕ್ಲಿಯರೆನ್ಸ್ ಪತ್ರ ನೀಡುವಂತೆ ಕೋರಿರುತ್ತಾರೆ.

ಕಟ್ಟಡದ ನಿರ್ಮಾಪಕರ ಕೋರಿಕೆಯಂತೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಧಿಕಾರಿಗಳು ದಿನಾಂಕ 11-06-2019 ರಂದು ಬೆಂಗಳೂರು, ಕೆಂಪೇಗೌಡ ನಗರ ವಾರ್ಡ್ ಸಂಖ್ಯೆ.49, ಬಸವನಗುಡಿ ರಸ್ತೆ, ಖಾತೆ ಸಂ.52/1 ರಲ್ಲಿ ನಿರ್ಮಿಸಿರುವ ಬಹುಮಹಡಿ ಶೈಕ್ಷಣಿಕ ಕಟ್ಟಡವನ್ನು ನಿರೀಕ್ಷಣೆ ಮಾಡಿ, ಕಟ್ಟಡ ನಿರ್ಮಾಪಕರು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ಮಾಡಿರುವ ಎಲ್ಲಾ ಸಲಹೆ ಹಾಗೂ ಶಿಫಾರಸ್ಸುಗಳನ್ನು ಪೂರ್ಣ ಅನುಷ್ಠಾನಗೊಳಿಸಿರುವುದಾಗಿ, ಅದರಲ್ಲಿ ವಾಸಿಸುವ ನಿವಾಸಿಗಳಿಗೆ ಅಗ್ನಿಶಮನ ಕುರಿತ ತರಬೇತಿ ಮಾತ್ರ ಬಾಕಿಯಿದ್ದು, ಕಟ್ಟಡದ ಸ್ವಾಧೀನತೆಯ ತರುವಾಯ ತರಬೇತಿ ನೀಡಲು ಸಾಧ್ಯವಾಗುತ್ತದೆಂದು ತಿಳಿಸಿರುತ್ತಾರೆ.

ಆದ್ದರಿಂದ ಬೆಂಗಳೂರು, ಕೆಂಪೇಗೌಡ ನಗರ ವಾರ್ಡ್ ಸಂಖ್ಯೆ.49, ಬಸವನಗುಡಿ ರಸ್ತೆ, ಖಾತೆ ಸಂ.52/1 ರಲ್ಲಿ ನಿರ್ಮಿಸಿರುವ 29.95 ಮೀಟರ್ ಎತ್ತರದ 2 ತಳಹಂತ, ನೆಲಹಂತ ಮತ್ತು 7 ಮೇಲಂತಸ್ತುಗಳನ್ನು ಹೊಂದಿರುವ ಬಹುಮಹಡಿ ಶೈಕ್ಷಣಿಕ ಕಟ್ಟಡ ಅಕಾಡೆಮಿಕ್ ಬ್ಲಾಕ್ ಕಟ್ಟಡಕ್ಕೆ ಸ್ವಾಧೀನತೆ ಪಡೆಯಲು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ನಿರಾಕ್ಷೇಪಣಾ ಪತ್ರ ಸಂಖ್ಯೆ ಜಿಬಿಸಿ(1)598/2013 ದಿನಾಂಕ 02-04-2014 ರಲ್ಲಿ ತಿಳಿಸಿರುವಂತೆ, ಅಗ್ನಿರಕ್ಷಣೆ ಮತ್ತು ನಿಯಂತ್ರಣ ಹಾಗೂ ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು, ಹಾಗೂ ಅಗ್ನಿಶಮನ ಉಪಕರಣಗಳನ್ನು ಸುಸ್ಥಿತಿಯಲ್ಲಿಡಬೇಕೆಂಬ ಷರತ್ತಿನ ಮೇಲೆ ಸ್ವಾಧೀನತಾ ಪ್ರಮಾಣ ಪತ್ರ ನೀಡಲು ಅಗ್ನಿಶಾಮಕ ಮತ್ತು ತುರ್ತು

ಸೇವಾ ಇಲಾಖೆಯ ಯಾವ ಆಕ್ಷೇಪಣೆ ಇಲ್ಲವೆಂದು ತಿಳಿಸಿದೆ. ಇನ್ನುಳಿದ ಫುಡ್ ಕೋರ್ಟ್ & ಸ್ಪೋರ್ಟ್ಸ್ ಕಾಂಪ್ಲೆಕ್ ಮತ್ತು ಎಂಎಲ್ಸಿ ಬ್ಲಾಕ್ಗಳ ನಿರ್ಮಾಣ ಕಾರ್ಯ ಮತ್ತು ಅಗ್ನಿಶಮನ ಹಾಗೂ ಅಗ್ನಿ ನಿವಾರಣೆ ಉಪಕರಣಗಳ ಅಳವಡಿಕೆ ಪೂರ್ಣಗೊಂಡ ತರುವಾಯ ಅವುಗಳ ಸ್ವಾಧೀನತೆ ಪಡೆಯಲು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಕ್ಲಿಯರೆನ್ಸ್ ಪತ್ರ ಪಡೆಯಲು ಅರ್ಜಿದಾರರಿಗೆ ಷರತ್ತು ವಿಧಿಸಲು ಕೋರಿದೆ.

ಕಟ್ಟಡ ನಿರ್ಮಾಪಕರು ದಿನಾಂಕ 18/04/2019 ರಂದು ಒಪ್ಪಿರುವಂತೆ ಸಲ್ಲಿಸಿರುವ ಮುಚ್ಚಳಿಕೆ ಪತ್ರದಂತೆ ಕಟ್ಟಡದಲ್ಲಿನ ಶೇಕಡಾ 40 ರಷ್ಟು ಸಿಬ್ಬಂದಿ/ನೌಕರರಿಗೆ ಅಗ್ನಿರಕ್ಷಣೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ, ಬೆಂಗಳೂರಿನ ಆರ್.ಎ.ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಆಕಾಡೆಮಿಯಲ್ಲಿ ಸೂಕ್ತ ತರಬೇತಿಯನ್ನು 6 ತಿಂಗಳೊಳಗೆ ಪಡೆಯಲು ವ್ಯವಸ್ಥಿಸಬೇಕೆಂಬ ಷರತ್ತಿಗೊಳಪಟ್ಟಿದೆ.

ಅಲ್ಲದೆ ಸದರಿ ಕಟ್ಟಡಗಳ ಅವರಣದ ಯಾವುದೇ ಭಾಗದಲ್ಲಿ ಎಲ್ಪಿಜಿ ಅಥವಾ ಹೆಚ್ಎಸ್ಡಿ ಇತ್ಯಾದಿಗಳನ್ನು ಶೇಖರಣೆ ಮಾಡಲು ಉದ್ದೇಶಿಸಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯತಕ್ಕದ್ದು.

ಈ ಕ್ಲಿಯರೆನ್ಸ್ ಪತ್ರವು ಸರ್ಕಾರಿ ಆದೇಶ ಸಂ. ಒಇ 33 ಕಅಸೇ 2011 ದಿನಾಂಕ 07/07/2011 ರಂತೆ, ಈ ದಿನಾಂಕದಿಂದ ಮುಂದಿನ 2 ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ. ತದನಂತರ ಈ ಕ್ಲಿಯರೆನ್ಸ್ ಪತ್ರವನ್ನು ದಿನಾಂಕ 10/07/2021 ರೊಳಗೆ ನವೀಕರಿಸುವಂತೆ ತಿಳಿಸಲಾಗಿದೆ.

ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಕಟ್ಟಡದಲ್ಲಿ ಇಲಾಖಾ ಶಿಫಾರಸ್ಸಿನನ್ವಯ ಅಳವಡಿಸಿರುವ ಅಗ್ನಿನಿವಾರಣೆ ಹಾಗೂ ಅಗ್ನಿಶಮನದ ಉಪಕರಣಗಳು ಸುಸ್ಥಿತಿಯಲ್ಲಿ ಇಲ್ಲದೇ ಇರುವುದು ಕಂಡು ಬಂದರೆ ಅಥವಾ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ಅಥವಾ ಕಾನೂನಿನ್ವಯ ಬಿಟ್ಟಿರುವ ತೆರೆದ ಪ್ರದೇಶದಲ್ಲಿ ಅಥವಾ ಕಟ್ಟಡದಲ್ಲಿ ಯಾವುದೇ ಹೆಚ್ಚುವರಿ ನಿರ್ಮಾಣ ಮಾಡಿದರೆ, ಅಥವಾ ಯಾವುದೇ ರೀತಿ ಖಾಯಂ/ತಾತ್ಕಾಲಿಕ ಅಡಚಣೆಗಳನ್ನುಂಟು ಮಾಡಿದರೆ ಹಾಗೂ ಮೇಲೆ ವಿವರಿಸಲಾದ ಬಾಕಿ ಉಳಿದಿರುವ ಶಿಫಾರಸ್ಸುಗಳನ್ನು ಮುಚ್ಚಳಿಕೆ ಪತ್ರದಲ್ಲಿ ಒಪ್ಪಿಕೊಂಡಂತೆ ಅಳವಡಿಸದಿದ್ದರೆ, ಈ ಕ್ಲಿಯರೆನ್ಸ್ ಪತ್ರ ಅನೂರ್ಜಿತ ಗೊಳ್ಳುವುದು ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

Director of Fire & Emergency Services, Karnataka

ತಮ್ಮ ವಿಶ್ವಾಸಿ,

ಪೊಲೀಸ್ ಮಹಾ ನಿರ್ದೇಶಕರು
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ಅಗ್ನಿಶಾಮಕ ಮತ್ತು
ತುರ್ತು ಸೇವೆಗಳು.

ಪ್ರತಿ:

1) ಮೆ: ಬಿ.ಎಂ.ಶ್ರೀನಿವಾಸಯ್ಯ ಎಜುಕೇಷನಲ್ ಟ್ರಸ್ಟ್, ಅಂಚೆ ಪೆಟ್ಟಿಗೆ ಸಂಖ್ಯೆ 1408, ಬಸವನಗುಡಿ ರಸ್ತೆ, ಬೆಂಗಳೂರು. 2) ಮುಖ್ಯ ಅಗ್ನಿಶಾಮಕ ಅಧಿಕಾರಿ, ಬೆಂಗಳೂರು ಪಶ್ಚಿಮ.

Digitally signed by SHIVA KUMAR K
Date: 2019.07.10 16:18:29 +05:30
Reason: Approved